

# ಅಪರೂಪದ ಆರ್ಕಿಡ್

ಕವಿ ಜಿ.ಎಸ್.ಉಬರಡ್ಕ ಅವರ ಮನೆಯೆದುರಿನ ವಿಜ್ಞೆ ಹೂದೋಟದ ಬದಿ ಬಾದಾಮಿ ಮರವಿದೆ. ಅದರಲ್ಲಿ ಗೊಂಚಲು ಗೊಂಚಲು ಹೂ ಬಿಟ್ಟಿರುವ ಈ ಅಪರೂಪದ ಅಪ್ಪು ಸಸ್ಯ (ಆರ್ಕಿಡ್) ಈ ಉರಿ ಬೇಸಗೆಯಲ್ಲಿ ಕೂಡಾ ಕಣ್ಣಿಗೂ ಮನಸ್ಸಿಗೂ ಹಿತವಾಗಿದೆ.

ನಳನಳಿಸುತ್ತಿರುವ ಈ ಆರ್ಕಿಡ್‌ನ ಹಿನ್ನೆಲೆ ಹೀಗಿದೆ: ಶಿವರಾಮ ಕಾರಂತರ ಮಿತ್ರರಾಗಿದ್ದ, ಜೇನುಕೃಷಿ ತಜ್ಞರೂ, ಹವ್ಯಾಸಗಳ ಹರಿಕಾರರೂ ಆಗಿದ್ದ ಪೈಲೂರು ಲಕ್ಷ್ಮೀನಾರಾಯಣ ರಾಯರು ಇದನ್ನು ದಾರ್ಜಿಲಿಂಗಿನಿಂದ ಮಂಗಳೂರಿಗೆ ತಂದು, ತಮ್ಮ ಮನೆಯಂಗಳದ ಹೂದೋಟದಲ್ಲಿ ಮಾವಿನ ಮರಕ್ಕೆ ಹಬ್ಬಿಸಿ ಬೆಳೆಸಿದ್ದರು. ಈ ಆರ್ಕಿಡ್‌ನ ಒಂದು ಟಿಸಿಲನ್ನು ಇಪ್ಪತ್ತು ವರ್ಷಗಳ ಹಿಂದೆ ಸುಳ್ಯ ಸಮೀಪದ ತಮ್ಮ ಮನೆಯ ಹೂದೋಟಕ್ಕೆ ತಂದಿದ್ದರು ಉಬರಡ್ಕ.

**ಚಿತ್ರ- ಬರಹ: ಜೈಮಿನಿ ಉಬರಡ್ಕ, ಸುಳ್ಯ**

# ವಲಸೆ ಹಕ್ಕಿಗಳ ಗೂಡು

ವಸಂತನ ಆಗಮನದೊಡನೆ ನಮ್ಮ ಬಡಾವಣೆಯಲ್ಲಿರುವ ಎತ್ತರದ ನೇರಳೆ ಮರಕ್ಕೆ ಹಲವಾರು ಹಕ್ಕಿಗಳ ಆಗಮನವೂ ಆಗುತ್ತದೆ. ಈ ಹಕ್ಕಿಗಳು ತಮ್ಮ ತಾತ್ಕಾಲಿಕ ವಾಸಕ್ಕಾಗಿ ಕಡ್ಡಿ, ಪರ್ಣ ಇತ್ಯಾದಿ ಪರಿಕರಗಳಿಂದ ಮರದ ಕೊಂಬೆಗಳಲ್ಲಿ ಕ್ಷಿಪ್ರವಾಗಿ ಗೂಡುಗಳನ್ನು ನಿರ್ಮಿಸಿಕೊಳ್ಳುತ್ತವೆ.  ಕೆಲವು ತಿಂಗಳುಗಳು ಸುಖ ಸಂಸಾರ ನಡೆಸಿದ ನಂತರ ಇಲ್ಲಿದ್ದುದು ಸುಮ್ಮನೆ ಎಂಬ ಸಂದೇಶ ನೀಡಿ ವಿದಾಯ ಹೇಳುತ್ತವೆ. ಈ ವರ್ಷವೂ ಸಹ ಪಕ್ಷಿಗಳು ಎಲ್ಲಿಂದಲೋ ವಲಸೆ ಬಂದಿವೆ. ಅದೇ ಮರದಲ್ಲಿ ಹತ್ತಾರು ಗೂಡುಗಳನ್ನು ಹೊಸದಾಗಿ ಕಟ್ಟಿಕೊಂಡಿವೆ.

**- ಮಂಜುನಾಥ. ಡಿ.ಎಸ್., ಬೆಂಗಳೂರು**





# ಕಪ್ಪುಪಟ್ಟಿಯ ಅಪ್ಪಟ ಕನ್ನಡಾಭಿಮಾನಿ!

ಸಾಗರ ( ಶಿವಮೊಗ್ಗ ಜಿಲ್ಲೆ ) ಪಟ್ಟಣದಲ್ಲಿ ಹೀಗೊಬ್ಬ ಅಪ್ಪಟ ಕನ್ನಡಾಭಿಮಾನಿ ಇದ್ದಾರೆ. ತಮ್ಮ ಷರಟಿನ ಮೇಲೆ ಸದಾ ಕಪ್ಪುಪಟ್ಟಿ ಧರಿಸಿರುತ್ತಾರೆ. ಹೀಗೆ ಧರಿಸುತ್ತ ಸಾಗಿ ಬಂದ ವರ್ಷ ಬರೋಬ್ಬರಿ ಹತ್ತು ! ಯಾಕೆ ಹೀಗೆ ಎಂದು ನಿಮಗೆ ಅನುಮಾನ ಬರುವುದು ಸಹಜ.

ಇವರ ಹೆಸರು ಶೇಖರ್ ಸಿ.ಎ. ಪೈಂಟಿಂಗ್ ಕೆಲಸ ಮಾಡುತ್ತಾರೆ. 2007 ರಲ್ಲಿ ಕರ್ನಾಟಕವು ತಮಿಳುನಾಡಿಗೆ ನೀರು ಬಿಡಬೇಕೆಂದು ನ್ಯಾಯಾಲಯ ತೀರ್ಪು ನೀಡಿದಾಗ ಅದನ್ನು ಖಂಡಿಸಿ ಶೇಖರ್ ಅವರು ಅಲ್ಲಿಂದ ಈವರೆಗೂ ತಮ್ಮ ಷರಟಿನ ಮೇಲೆ ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ನಡೆಸುತ್ತ ಬಂದಿದ್ದಾರೆ. 'ನಮ್ಮ ರಾಜ್ಯಕ್ಕೇ ನೀರಿಲ್ಲ, ತಮಿಳುನಾಡಿಗೆ ನೀರು ಬಿಡುವುದು ಹೇಗೆ ?' ಎಂದವರು ಪ್ರಶ್ನಿಸುತ್ತಾರೆ.

ಕಪ್ಪುಪಟ್ಟಿ ಧರಿಸುವ ಮೂಲಕ ತಮ್ಮ ಸಾಂಕೇತಿಕ ಪ್ರತಿಭಟನೆಯನ್ನು ಪ್ರತಿದಿನವೂ ದಾಖಲಿಸುತ್ತ ಬಂದಿದ್ದಾರೆ. ಹೇಗಿದೆ ನೋಡಿ ಇವರ ಅಪ್ಪಟ ಕನ್ನಡಾಭಿಮಾನ ?

**ಚಿತ್ರ- ಬರಹ: ಗಣಪತಿ ಶಿರಳಗಿ, ಸಾಗರ**